4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 328/2022

ಫಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕ ಉಪ ನಿರೀಕ್ಷಕರು,
ಕಾನೂನು ಮತ್ತು ಸುವ್ಯವಸ್ಥೆ,
ಉದಯ ಪೊಲೀಸ್ ಠಾಣೆ,
ಮೈಸೂರು.

**ವಿರುದ್ಧ**

ಆರೋಪಿತರು : ಶ್ರೀ ಮಹೇಂದ್ರ @ ಬೆಂಕಿ
ಮತ್ತು ಇತರರು

## ದೋಷಾರೋಪಣೆ

ನಾನು ಶ್ರೀ ಮಲ್ಲನಗೌಡ, 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಈ ಕೆಳಕಂಡ ಆರೋಪಿಯಾದ :–

1. ಶ್ರೀ ಮಹೇಂದ್ರ @ ಬೆಂಕಿ
ಬಿನ್ ಲೇಟ್ ಮಹದೇವು,
21 ವರ್ಷ,
ವಾಸಃ–
ಮನೆ ನಂ.1500,
ಬಸವನಗುಡಿ ಹಿಂಭಾಗದ ರಸ್ತೆ,
ಕ್ಯಾತಮಾರನಹಳ್ಳಿ,
ಮೈಸೂರು.

2. ಶ್ರೀ ವಿಜಯ್
@ ಸೊಪ್ಪು,
ಬಿನ್ ಪರಶರಾಮ್,
20 ವರ್ಷ,

ವಾಸಃ–ಮನೆ ನಂ.6,
ಬಸವನಗುಡಿ ಹಿಂಭಾಗ,
ಇಂಡಿಯನ್ ಬೇಕರಿ ಹತ್ತಿರ,
ಕ್ಯಾತಮಾರನಹಳ್ಳಿ,
ಮೈಸೂರು ನಗರ

3. ಶ್ರೀ ಇರ್ಫಾನ್ ಖಾನ್,
@ ಖಾನ್ ಸಾಬ್ @ ಮೌಲಿ ಸಾಬ್,
ಬಿನ್ ಬಾಬು, 21 ವರ್ಷ
ಮನೆ ನಂ.411,
1 ನೇ ಕ್ರಾಸ್,
ಟೆಂಟ್ ಡೌನ್,
ಕ್ಯಾತಮಾರನಹಳ್ಳಿ,
ಮೈಸೂರು

4. ಶ್ರೀ ಉಮೇಶ @ ಊದ
ಬಿನ್ ಲೇಟ್ ಚೆಲುವರಾಜು,
21 ವರ್ಷ,
ವಾಸಃ–
ಮನೆ ನಂ.404,
9 ನೇ ಕ್ರಾಸ್,
ಶ್ರೀಕಂಠಯ್ಯ ಸ್ಕೂಲ್ ಹತ್ತಿರ,
ಕೆ ಎನ್ ಪುರ,
ಮೈಸೂರು

5. ಶ್ರೀ ತಮೀಮ್ ಪಾಷ
@ ಗಿಡ್ಡು
ಬಿನ್ ಅಮ್ಜದ್ ಪಾಷ
21 ವರ್ಷ
ವಾಸಃ–
ಮನೆ ನಂ .302,

4 ನೇ ಕ್ರಾಸ್,
ಹರಿಶ್ಚಂದ್ರಘಾಟ್ ರಸ್ತೆ,
ಶ್ರೀಕಂಠಯ್ಯರವರ
ಮನೆಯ ಹತ್ತಿರ,
ಕ್ಯಾತಮಾರನಹಳ್ಳಿ
ಮೈಸೂರು.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಮೈಸೂರು ನಗರ, ಉದಯಗಿರಿ ಪೊಲೀಸ್ ಠಾಣಾ ಸರಹದ್ದು, ಕ್ಯಾತಮಾರನಹಳ್ಳಿ, ಎ.ಕೆ.ಕಾಲೋನಿ, ದೊಡ್ಡ ಗರಡಿ ರಸ್ತೆ, ನಂ 115/1 ರಲ್ಲಿ ವಾಸವಾಗಿರುವ 1 ನೇ ಸಾಕ್ಷಿದಾರರಿಗೂ ಹಾಗೂ ಈ ಪ್ರಕಾರಣ 1, 3 ರಿಂದ 5 ನೇ ಆರೋಪಿತರಾದ ನಿಮಗೂ, 2 ನೇ ಆರೋಪಿತರಿಗೂ ಹಾಗೂ ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕನಿಗೂ ಪರಿಚಯವಿದ್ದು, 1, 3 ರಿಂದ 5 ನೇ ಆರೋಪಿತರಾದ ನೀವು ಹಾಗೂ 2 ನೇ ಆರೋಪಿತ ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ ಹಿಂದಿನಿಂದಲೂ ಸಣ್ಣಪುಟ್ಟ ವಿಚಾರಗಳಿಗೆ 1 ನೇ ಸಾಕ್ಷಿದಾರರ ಜೊತೆ ಜಗಳ ಮಾಡುತ್ತಾ ದ್ವೇಷ ಸಾಧಿಸುತ್ತಿದ್ದು, ಅದರಂತೆ ದಿನಾಂಕ 14-11-2018 ರಂದು ರಾತ್ರಿ 10-00 ಗಂಟೆಯ ಸಮಯದಲ್ಲಿ ಕ್ಯಾತಮಾರನಹಳ್ಳಿ ಮುಖ್ಯರಸ್ತೆ, ಹುಲಿಯಮ್ಮ ಬಾರ್ ಮುಂಭಾಗದ ಟಾರ್ ರಸ್ತೆಯಲ್ಲಿ 1 ರಿಂದ 5 ರವರೆಗಿನ ಆರೋಪಿಗಳು ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ ಎಲ್ಲರೂ ರಸ್ತೆಯಲ್ಲಿ ದೊಂಬಿ ಮಾಡುವ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ 149 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 1, 3 ರಿಂದ 5 ನೇ ಆರೋಪಿತರಾದ ನೀವು ಹಾಗೂ 2 ನೇ ಆರೋಪಿತ ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ 1 ನೇ ಸಾಕ್ಷಿದಾರರ ವಿರುದ್ಧ ಬಲಪ್ರಯೋಗ ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ 149 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 1, 3 ರಿಂದ 5 ನೇ

ಆರೋಪಿತರಾದ ನೀವು ಹಾಗೂ 2 ನೇ ಆರೋಪಿತ ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ , ಕೈಯಲ್ಲಿ ದೊಣ್ಣೆ ಮತ್ತು ಕಲ್ಲನ್ನು ಹಿಡಿದುಕೊಂಡು 1 ನೇ ಸಾಕ್ಷಿದಾರರ ವಿರುದ್ಧ ಬಲಪ್ರಯೋಗ ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ 149 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ನಾಲ್ಕ ನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 1, 3 ರಿಂದ 5 ನೇ ಆರೋಪಿತರಾದ ನೀವು ಹಾಗೂ 2 ನೇ ಆರೋಪಿತ ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ, ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ 1 ನೇ ಸಾಕ್ಷಿದಾರರಿಗೆ ಡಿಕ್ಕಿ ಹೊಡೆದು, ಮುಂದಕ್ಕೆ ಹೋಗದಂತೆ ತಡೆದಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ 149 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಐದನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 2 1, 3 ರಿಂದ 5 ನೇ ಆರೋಪಿತರಾದ ನೀವು ಹಾಗೂ 2 ನೇ ಆರೋಪಿತ ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕನೊಂದಿಗೆ ಜೋರಾಗಿ ಕಿರುಚಾಡುತ್ತಾ, ಒಬ್ಬರಿಗೊಬ್ಬರು ತಳ್ಳಾಡಿಕೊಂಡು ಬರುತ್ತಿದ್ದು, ಆ ಸಮಯಕ್ಕೆ ಅದೇ ರಸ್ತೆಯಲ್ಲಿ 1 ಮತ್ತು 2 ನೇ ಸಾಕ್ಷಿದಾರರು ನಡೆದುಕೊಂಡು ಬರುತ್ತಿದ್ದಾಗ ಆರೋಪಿಗಳು 1 ನೇ ಸಾಕ್ಷಿದಾರರಿಗೆ ಡಿಕ್ಕಿ ಹೊಡೆದಿದ್ದು, ಆಗ 1 ನೇ ಸಾಕ್ಷಿದಾರರು "ಏಕೆ ಈ ರೀತಿ ರಸ್ತೆಯಲ್ಲಿ ಓಡಾಡುವವರಿಗೆ ತೊಂದರೆ ಕೊಡುತ್ತೀರಿ' ಎಂದು ಕೇಳಿದ್ದಕ್ಕೆ 1 ಮತ್ತು 2 ನೇ ಆರೋಪಿಗಳು " ಏನೋ ಬೋಳಿಮಗನೇ ನೀನು ನಮ್ಮನ್ನೇ ಕೇಳುವಷ್ಟು ಬೆಳೆದಿದ್ದೀಯಾ. ನಿನಗೆ ಒಂದು ಗತಿ ಕಾಣಿಸಬೇಕೆಂದು ಮೊದಲೆ ಅಂಡ್ಕೊಂಡಿದ್ವಿ ಈಗ ಸಿಕ್ಕಿದ್ದೀಯಾ ಸೂಳೆಮಗನೇ, ಇವತ್ತು ನಿನಗೆ ಒಂದು ಗತಿ ಕಾಣಿಸದೆ ಬಿಡುವುದಿಲ್ಲ' ಎಂದು ಅವಾಚ್ಯ ಶಬ್ದಗಳಿಂದ ಬೈಯಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಆರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 1, 3 ರಿಂದ 5 ನೇ ಆರೋಪಿತರಾದ ನೀವು ಹಾಗೂ 2 ನೇ ಆರೋಪಿತ ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ ಸೇರಿ, ಸಾಕ್ಷಿ–1 ರವರಿಗೆ ಬೆದರಿಕೆಯನ್ನು ಹಾಕಿದ್ದಲ್ಲದೇ 1 ಮತ್ತು 2 ನೇ ಆರೋಪಿಗಳು ಅವರ ಜೊತೆ ಇದ್ದವರಿಗೆ 'ಹಿಡ್ಕೊಳ್ರೊ ಇವನ್ನ ಇವತ್ತು ಮುಗ್ಸಿಯೇ ಬಿಡೋಣ, ಇನ್ನೊಬ್ಬನ್ನ ಮುಗ್ಸಿದ್ರೆ ಏರಿಯಾದಲ್ಲಿ ಎಲ್ರುರೂ ನಮ್ಮನ್ನು ನೋಡಿ ಹೆದರಿಕೊಂಡು ನಮ್ಮ ತಂಟೆಗೆ ಬರುವುದಿಲ್ಲ" ಎಂದು ಬೆದರಿಕೆ ಹಾಕಿದ್ದು, ಆ

ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಏಳನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 4 ಮತ್ತು 5 ನೇ ಆರೋಪಿಗಳು 1 ನೇ ಸಾಕ್ಷಿದಾರರನ್ನು ತಬ್ಬಿ ಹಿಡಿದುಕೊಂಡು, ಅವರ ಕೈಗಳಿಂದ 1 ನೇ ಸಾಕ್ಷಿದಾರರ ಮುಖ, ಬಾಯಿ, ಮೈಕೈಗೆ ಹೊಡೆದು ನೋವುಂಟು ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಎಂಟನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ,1 ನೇ ಆರೋಪಿಯು 1 ನೇ ಸಾಕ್ಷಿದಾರರನ್ನು ಕೊಲೆ ಮಾಡುವ ಉದ್ದೇಶದಿಂದ ಒಂದು ಮರದ ದೊಣ್ಣೆಯಲ್ಲಿ ತಲೆಯ ಹಿಂಭಾಗಕ್ಕೆ 2–3 ಸಾರಿ ಜೋರಾಗಿ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 307 ಸಹವಾಚಕ 34 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 2 ನೇ ಆರೋಪಿತ ಒಂದು ಹಿಡಿಗಾತ್ರ ಕಲ್ಲಿನಿಂದ 1 ನೇ ಸಾಕ್ಷಿದಾರರ ತಲೆಗೆ ಹೊಡೆದಿದ್ದಲ್ಲದೇ ಅವರ ಜೊತೆ ಇದ್ದ 3 ನೇ ಆರೋಪಿ ಮತ್ತು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ ಇಬ್ಬರು 1 ನೇ ಸಾಕ್ಷಿದಾರರನ್ನು ನೆಲದ ಮೇಲೆ ಬೀಳಿಸಿಕೊಂಡು ತಮ್ಮ ಕಾಲುಗಳಿಂದ ತುಳಿದು ನೋವುಂಟು ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಈ ಮೇಲ್ಕಂಡ ಆರೋಪದಡಿ ಆರೋಪಿತರಾದ ನೀವು ನನ್ನಿಂದ ಈ ದಿನ ದಿನಾಂಕ 22.02.2024 ರಂದು ಅಧಿವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 328/2022

| | | |
|---|---|---|
| ಫಿರ್ಯಾದಿ | : | ಕರ್ನಾಟಕ ರಾಜ್ಯ ಸರ್ಕಾರ<br>ಆರಕ್ಷಕ ನಿರೀಕ್ಷಕರು,<br>ಉದಯ ಪೊಲೀಸ್ ಠಾಣೆ,<br>ಮೈಸೂರು. |
| | | **ವಿರುದ್ಧ** |
| ಆರೋಪಿ–1 | : | ಶ್ರೀ ಮಹೇಂದ್ರ @ ಬೆಂಕಿ |

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 22.02.2024 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 328/2022

| | | |
|---|---|---|
| ಫಿರ್ಯಾದಿ | : | ಕರ್ನಾಟಕ ರಾಜ್ಯ ಸರ್ಕಾರ<br>ಆರಕ್ಷಕ ನಿರೀಕ್ಷಕರು,<br>ಉದಯ ಪೊಲೀಸ್ ಠಾಣೆ,<br>ಮೈಸೂರು. |
| | | **ವಿರುದ್ಧ** |
| ಆರೋಪಿ–2 | : | ಶ್ರೀ ವಿಜಯ್ @ ಸೊಪ್ಪ |

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 22.02.2024 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 328/2022

| | | |
|---|---|---|
| ಫಿರ್ಯಾದಿ | : | ಕರ್ನಾಟಕ ರಾಜ್ಯ ಸರ್ಕಾರ<br>ಆರಕ್ಷಕ ನಿರೀಕ್ಷಕರು,<br>ಉದಯ ಪೊಲೀಸ್ ಠಾಣೆ,<br>ಮೈಸೂರು. |
| | | **ವಿರುದ್ಧ** |
| ಆರೋಪಿ–3 | : | ಶ್ರೀ ಇರ್ಫಾನ್ ಖಾನ್<br>@ ಖಾನ್ ಸಾಬ್<br>@ ಮೌಲಿ ಸಾಬ್ |

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 22.02.2024 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 328/2022

ಫಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕ ನಿರೀಕ್ಷಕರು,
ಉದಯ ಪೊಲೀಸ್ ಠಾಣೆ,
ಮೈಸೂರು.

**ವಿರುದ್ಧ**

ಆರೋಪಿ–4 : ಶ್ರೀ ಉಮೇಶ್
@ ಊದ

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 22.02.2024 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 328/2022

ಫಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕ ನಿರೀಕ್ಷಕರು,
ಉದಯ ಪೊಲೀಸ್ ಠಾಣೆ,
ಮೈಸೂರು.

**ವಿರುದ್ಧ**

ಆರೋಪಿ–5 : ಶ್ರೀ ತಮೀಮ್ ಪಾಷ
@ ಗಿಡ್ಡು

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 22.02.2024 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.